# Subject Code – 16[NS]
# Optional Kannada – March 2017

## 'ಅ' ವಿಭಾಗ

**I**

ಅಂಕಗಳು

1) ನೀಲಾಂಜನಿ 1
2) ಅರ್ಜುನನ 1
3) ಮಡಕೆ 1
4) ಅಲ್ಲಮ ಪ್ರಭು 1
5) ವಿದ್ಯಾರ್ಥಿಗೆ ಗುರುದೈವ 1
6) ಸಿಂದಿಯನ್ನು ಸೇವಿಸಿದವನು 1
7) ಯೋಗ್ಯವರನಿಗಿತ್ತ ಕುಲಪುತ್ರಿ ಕುಲಕೋಟಿಯನ್ನು ಉದ್ಧರಿಸುವವಳು 1
8) ನಾಗಿ, ನಾಗವೇಣಿ 1
9) ಪೊರಕೆ 1
10) ಶಿವ 1

## 'ಆ' ವಿಭಾಗ

**II**

11) ಸೋಮವಂಶದ ತಿಲಕನಾದ ಸೋಮಪ್ರಭು, ಹರಿ ವಂಶದ ಶ್ರೇಷ್ಠನಾದ ಹರಿಕಾಂತ, ನಾಟವಂಶದ ನಾಯಕನಾದ ಅನುಕಂಪನು, ಉಗ್ರವಂಶದ ಪ್ರಮುಖನಾದ ಕಾಶಪ್ಪನು. 2
12) ಬಂದರೂ, ಹೋದರೂ, ನಿಂತರೂ, ನೆರೆದರೂ ಹಾಗು ಊಟ, ನಿದ್ರೆ. 2
13) ಕಡಲಿನ ನೀರು ಅಮೃತದ ಮಾಡಲಾಗಬಹುದು, ಸುರಗಿರಿಯು ಕುಡಿವಿಡಿದು ಹಬ್ಬಿದೆಡೆ ಹಬ್ಬುಹುದು, ಆದರೆ ಮಾಯೆಗೆ ಯಾವುದೇ ಕಾಲಕ್ಕೂ ಪರಮ ತತ್ವಜ್ಞಾನವಿಲ್ಲವೆಂದ. 2
14) ಆಡಿ ಮಾಡುವವನು ಮಧ್ಯಮ, ಆಡಿಯೂ ಮಾಡದವನು ಅಧಮ. 2
15) ಉದ್ಧರಿಕೊಟ್ಟವನು ಹದ್ದು, ಹಾವು, ನಾಯಿ, ಹುತ್ತದಲ್ಲಿರುವ ಗೊದ್ದ (ದೊಡ್ಡ ಇರುವೆ). 2
16) ಮದುವೆಯಾದ ಯವ್ವನದಿಂದ ಇಲ್ಲಿವರೆಗೂ ಜೊತೆಗೂಡಿ ಬಾಳಿದವಳೆಂದು ಅರಿತು ಇಳಿಯವಯಸ್ಸಿನಲ್ಲಿಯೂ ಅದೇ ಸ್ನೇಹದಿಂದ ನೋಡಿಕೊಳ್ಳಬೇಕು. 2

**III**

17) ಷಡಕ್ಷರಿದೇವನ "ಸೌಜನ್ಯವಿದೂರನಾದೆನ್", ಅರ್ಜುನನು ಬೇಡನ ವೇಷದಲ್ಲಿರುವ ಶಿವನನ್ನು ಮೆಚ್ಚಿ ಹೇಳಿದ ಮಾತು. 3
18) ಹರಿಹರನ "ಆಡಿದನಾಡಿದನಾಹು ಶಂಕರ", ಶಿವನು ಗುಂಡನ ಹೃದಯದಲ್ಲಿಯೂ ದೇವಲೋಕದ ತಂಡದ ಸುಖದೊಳು ಮೂಡುತ್ತಿದ್ದು, ಭೇಧವನರಿಯದೆ ಅಲ್ಲಿಯೂ ಇಲ್ಲಿಯೂ ಮೂಡುತಿದ್ದ ಶಿವನನ್ನು ಆಶ್ಚರ್ಯದಿಂದ ಬೆರಗಾಗಿ ನಿವ್ವನಾಡಿಪ ಭಕ್ತನಾದಾವಂ ನಿಮ್ಮ ಮೆಚ್ಚಿಪ ಶರಣನಾದಾವಂ ಎಂದು ಗಿರಿಜೆ ಕೇಳುತ್ತಾಳೆ. 3
19) ಚಾಮರಸನ "ಕಾಳುಮತಿಗಳಿಗೆನಿತು ಬುದ್ಧಿಯ ಹೇಳಿದರೆ ಫಲವೇನು?", ವಿಮಳೆ ವಿನಯದಿಂದ ಅಲ್ಲಮನಿಗೆ ಮಾಯೆಯ ತನುಮನವನ್ನು ತಿಳಿದು ನೋಡು ನಿನ್ನೆಯ ಕರುಮ ಆಕೆಗೆ ಹರಣವೆಂದು ಹೇಳಿದಳು. 3

20) ಚಿಕ್ಕುಪಾಧ್ಯಾಯರ "ಕೊಲ್ಲುಡು ಧರ್ಮವೇ ಕಳುವುದುನೀತಿಯೇ?", ಚಿಕ್ಕುಪಾದ್ಯರು ಚಿಂತಾಮಣಿ ಮಣಿಯಲ್ಲ ಅದು ಚಿಂತೆಯನ್ನು ನೀಡುವುದರಿಂದ, ಚಿಂತೆಯಿಂದ ದೂರಉಳಿದಾತನೇ ಚಿಂತಾರತ್ನ, ಅವನೇ ಶ್ರೀರಂಗಧಾಮ ಎಂದು ಹೇಳುತ್ತಾರೆ. 3

21) ಸರ್ವಜ್ಞನ "ಹಸನಾಗಿ ದುಡಿದರೆ ಅಶನ ವಸನಗಳು", ನದಿಯು ಕಾಲಿಲ್ಲದೆ ಹರಿಯುವುದು, ತೋಳಿಲ್ಲದೆ ಚಾಚುವುದು, ನಾಲಿಗೆಯಿಲ್ಲದೆ ಉಲಿಯುವುದು ಎಂಬ ವಿಚಾರವನ್ನು ಒಗಟು ರೂಪದಲ್ಲಿ ಹೇಳಿದ್ದಾರೆ. 3

IV

22) ವಿರೂಪಾಕ್ಷನ ಉಪೇಕ್ಷೆಯಿಂದ ಪರಾಜಯ ಉಂಟಾಯಿತು. ನಿಜಾಂತರಂಗದಲ್ಲಿ ಆಲೋಚಿಸಿ ಶಂಕರನಲ್ಲಿ ಕಿಂಕರ ಭಾವದಿಂದ ವೈರಿಯಾದ ಬೇಡನನ್ನು ಸೋಲಿಸಲು ಪರಮ ಶೈವಾಗಮ ಮೋಕ್ಷಾವಿಧಿಯ ಪ್ರಕಾರ ಮರಳಿನಲ್ಲಿ ಲಿಂಗ ಮಾಡಿ ಹೂ ಬಿಲ್ವ ಪತ್ರಗಳಿಂದ ಪೂಜೆಗಾಗಿ ಮರಳಲಿಂಗದ ಮೇಲೆ ಹೂರಾಶಿಹಾಕಿದಾಗ ಕ್ಷಣಾರ್ಧದಲ್ಲಿ ಕಿರಾತನ ತಲೆಯಲ್ಲಿರಲು ತಿರುಗಿ ನೋಡಿದಾಗ, ಲಿಂಗದ ಮೇಲೆ ಹೂಗಳಿಲ್ಲದನ್ನು ಕಂಡು ಈತ ಕಿರಾತನಲ್ಲ, ಸಾಕ್ಷಾತ್ ಶಿವನೆಂದು ಅರಿವಿಗೆ ಬಂದಾಗ ಬಾಗಿಲದ ಕಾದ ತೆರೆದಂತೆ ಹೃದಯದ ಬಾಗಿಲು ತೆರೆದು ರೋಮಾಂಚನಗೊಂಡು ಮೈಕೂದಲುಗಳಿಂದ ನಿಮಿರಿನಿಂತು ಬೆವೆತುಕೊಳ್ಳುವನು. ಯುದ್ಧಮಾಡುವ ಬಯಕೆ ಹೊರತು ಹೋಯಿತು, ಕೌತುಕ, ಉತ್ಸಾಹ ಮಡುಗಟ್ಟಿತ್ತು, ಅಡಗಿದ್ದ ಭೀತಿಯು ಭಯವು ಬೇರುಹರಿದು ಹೋಯಿತು. ಸಂತೋಷ ಹೆಚ್ಚಿತು. ಶ್ರೇಷ್ಟನಾದ ಶಿವನು ಪೂರ್ಣಪ್ರಕಾಶನಾದ ಪಶುಪತಿಯು ಪರಾಶಕ್ತನಾದ ಈತನನ್ನು ಶಿವನೆಂದು ಅರಿಯದೆ ಕಾಡುಬೇಡನೆಂದು ಬಗೆದು ಎದುರಿಗೆ ನಿಂತು ಯುದ್ಧ ಮಾಡಿದೆ. ಮಾರುವೇಷದಲ್ಲಿದ್ದ ಶಿವನನ್ನು ತಿಳಿಯದೆ ಸೌಜನ್ಯವಿದುರನಾದೆ. ನನ್ನಂತಹ ಮುರ್ಖ ಬೇರೆಯಾರಿದ್ದಾರೆಂದು ವ್ಯಥೆಪಡುತ್ತಾನೆ. 4

23) ಕುಂಬಾರ ಗುಂಡಯ್ಯನು ಘಾತಕಾಯಕದಲ್ಲಿ ಮೈಮರೆತು ತೊಡಗಿಕೊಂಡು, ಕಾಯಕವೇ ಪೂಜೆಯಾಗಿ ಒಳಗೊಳ್ಳುತ್ತಿರೆ, ಕಾಮಹರಂ ಶಿವನು ನಲಿದಾಡುತ್ತಿರೆ ತಟಪಟ ತಂದನ ದಿಮ್ಮಿಕ್ಕೆನಿಸುವ ಮಡಿಕೆಯ ಧ್ವನಿಯು ಹೊಸ ಕಹಳೆಯ ನಾದಂ. ಶಿವನಿಗೆ ಜೊತೆಗೂಡಿದ ಮೃದುನಾದ ಮಧುರತೆಯಿಂದ ಕೂಡಿದ್ದರಿಂದ ತನ್ನನ್ನು ಮರೆಯುತ್ತಾ ಕೈಲಾಸದ ಒಡ್ಡೋಲಗದಲ್ಲಿ ಪಾರ್ವತಿಯ ಪಕ್ಕದಲ್ಲಿದ್ದರೂ ಗುಂಡಯ್ಯನ ಹೃದಯದಲ್ಲಿ ಆಡುವನು. ಗುಂಡಯ್ಯನು ಕುಣಿದಾಡುತ ಮಡಕೆಗಳನ್ನು ಬಾರಿಸಿ ಹೊಸನೃತ್ಯವನ್ನು ನೋಡುವ ಶಿವನಿಗೆ ಸುಖದಾಟವು ಮನಮುಟ್ಟಲು ಭುಉಮಿಯು ಒಪ್ಪುವ ರೀತಿಯಲ್ಲಿ ಆಡುವೆನೆನುತ ಹಟ್ಟುಬುಜಗಳನ್ನು ದಿಕ್ಕುಗಳಲ್ಲಿ ಪಸರಿಸಿ ಕೈಗಳನ್ನೆತ್ತಿ ಒಂದು ಪಾದವು ಪಾತಳವೊತ್ತಲು, ಇನ್ನೊಂದು ಪಾದವು ಬ್ರಹ್ಮಾನಂಡವೊತ್ತಲು ಜೆಡಿಯು ಬಿಡದೆ ಅಲ್ಲಾಡುತ್ತಿರಲು ಸುರನದಿ ತುಳುಕಾಡುತ್ತಿರಲು, ಚಂದ್ರನ ಬೆಳಕು ಚಲ್ಲುತಿರಲು, ಡಮರುಗವು ಢಮ್ ಢಮ್ ಧನಲೆನೆ, ತ್ರೀಶೂಲವುತಿರುಗಿದಾಗ ಹೊಳಪು ಚಲ್ಲುವುದು, ಹಗಲು ಹೆದೆಯೆತ್ತಲು ಉಟ್ಟಂತಹ ಗಾಜದೊಗಲು ಆಕಾಶದತ್ತ ಭೊಂಕರಿಸಲು ಬ್ರಹ್ಮನ ತಲೆಯು ಬೊಬ್ಬಿಡಲು ಸುರರ ಶಿರೋಮಾಲೆಗಳು ಉಲಿಯುತ್ತಿರಲು, ಪೊಂಗೆಜ್ಜೆಗಳ ದ್ವನಿ ಗಲಗಲ ಮಾಡಲು, ತೊಂಗಲಗಂಟೆ ಢನಂ ಢನಲೆನು ಆಗ ಶಂಕರನು ಭಕ್ತಿಗೆ ಮೆಚ್ಚಿ ಕುಣಿದ ಬಗೆ. 4

24) ವಿಮಳೆ ಅಲ್ಲಮರನ್ನು ಶರಣಜನಾರಕ್ಷಾಮಣಿ, ಕಿಂಕರ ಚಕೋರ ಸುಧಾಕರ, ಭಾಸುರ ದಯಾಅಂಬುನಿಧಿ ಎಂದು ಹೇಳುತ್ತಾ ಮಾಯೆಯ ತನುಮನವನ್ನು ತಿಳಿದು ನೋಡು, ನಿನ್ನ ಕರುಣೆ ಆಕೆಗೆ ಪ್ರಾಣ, ನೀರಿಗೆ ಹೆಪ್ಪನ್ನೇರಿದರೆ ಹಾಲಿನಂತೆ ಹೆತ್ತು (ಹೆಪ್ಪು) ಯಾರಾದರೂ ಊಟ ಮಾಡಿದ್ದುಂಟು.ಕಳುಮತಿಗಳಿಗೆ ಎನಿತು ಬುದ್ಧಿ ಹೇಳಿದರೂ ಫಲವಿಲ್ಲ. ಕೀಳು ಕಬ್ಬಿಣವೆಂದು ಕೋಪಿಸಿ ಕಾಲಲ್ಲಿ ಒಡೆಯದೆ ಕರುಣಿಸಿ ತೋಳಲ್ಲಿ ಅಪ್ಪಿದರೆ ಗಂಡು ಪರಶುಮಣಿಯಂತಾಗಬಹುದು. ಕಬ್ಬಿಣವನ್ನು ಪರಮುಮುಟ್ಟಲು ಕನಕವಾಗುವುದು, ಸುಮ್ಮನೆ ಹಳೆಹಂಚು ಮುಟ್ಟಿದರೆ ಹೊನ್ನವಾಗುತ್ತದೆಯೇ.ಒಂದ್ಯ ಬೀಜವ ಬಿತ್ತಿ ಮತ್ತೊಂದು ಫಲವನ್ನು ಬಯಸಿ ಉಬ್ಬಿಹೋದರೆ ಬಂದದ್ದಾರೂ ಏನು? ಏನೇ ಆಗಲಿ ಘನಮಹಿಮ ನಿನ್ನಯ ಪಾದವನ್ನು ಸಂಪಾದಿಸಿದ ಬಳಿಕ ನಿನ್ನಯ ಕರುಣೆ ಅವಳನ್ನು ರಕ್ಷಿಸಬಹುದು ಮಧುರ ಮಾತುಗಳಾಡುವಳು ವಿಮಳೆ. 4

25) ಆಪತ್ತಿನಲ್ಲಿ ಧೈರ್ಯ, ಶ್ರೇಯಸ್ಸಿನಲ್ಲಿ ಕ್ಷೇಮ, ಕೂಪದಲ್ಲಿ ತಿಳುವಳಿಕೆ, ಸಿರಿಗೆ ಉದಾರತೆ, ವಿದ್ಯಾಪರಿಣಿತಿಗೆ ವಿನಯ, ಬಾಳಿನಲ್ಲಿ ಪರಹಿತ, ಗುಣಾದಾಯವಿಲ್ಲದಿದ್ದರೆ ಹಗೆತನ ಮನುಜನಿಗೆ, ಕಾಯಕದಲ್ಲಿ ತೊಡಗಿದ್ದಾರೆ ಸೋಮಾರಿತನದಿಂದ ರೋಗ, ಬಾಗಿ ನೆಡೆಯುವನ ಮೇಲೆ ಮತ್ಸರವ ತೋರಿದರೆ ನರಕ. ಕೊಳ್ಳುವುದು ಧರ್ಮವಲ್ಲ. ಕಳ್ಳತನ ಮಾಡುವುದು ನೀತಿಯಲ್ಲ. ಸಜ್ಜನರ ಮೇಲೆ ಗೆಲುವು ಒಳ್ಳೆಯದಲ್ಲ. ಪರಸ್ತ್ರೀಯರ ಮೇಲೆ ಮೋಹ ಒಳ್ಳೆಯದಲ್ಲ. ಕೋಪ ಇರಲಿ, ಹೊಟ್ಟೆಕಿಚ್ಚು ಬೇಡ. ಧರ್ಮಉಳ್ಳವನೇ ಹಿರಿಯ. ದುಷ್ಕರ್ಮವನ್ನು ನಿವಾರಿಸುವವನೇ ಗುರು. ತನ್ನ ಮರ್ಮವನ್ನು ಅರಿತವನೇ ನಿಜವಾದ ಮಿತ್ರ. 4

) ಸಂಚಿ ಹೊನ್ನಮ್ಮ ಹೆಣ್ಣು ಎಂದರೆ ಮೂಗು ಮುರಿಯುವ ಪ್ರವೃತ್ತಿ ಬೇಡ. ಗಂಡು ಹೆಣ್ಣುಗಳಲ್ಲಿ ತಾರತಮ್ಯ ಬೇಡ. ಹೆಣ್ಣಲ್ಲವೇ ನಮ್ಮನ್ನೆಲ್ಲ ಹಡೆದ ತಾಯಿ. ಹೆಣ್ಣಲ್ಲವೇ ರಕ್ಷಿಸಿದವಳು. ಹೆಣ್ಣು ಹೆಣ್ಣು ಎಂದೇಕೆ ಕೀಳಾಗಿ ಕಾಣುತ್ತೀರಿ. ಕುಮಾರನಾದರೆ ಬರುವ ಗುಣವೇನು? ಕುವರಿಯಾದರೆ ಬರುವ ತೊಂದರೆ ಏನು? ಇವರೀರ್ವರನ್ನು ಯೋಗ್ಯವಾದ ರೀತಿಯಿಂದ ಬೆಳೆಸಿದರೆ ನಮಗೆ ಪರಮ ಸೌಖ್ಯ ದೊರಕುವುದು. ಕುಲಪುತ್ರ ಓದಿ ತಿಳಿದು ನೆಡೆಯ್ಬಲ್ಲನು. ಕುಲವನ್ನು ಉದ್ಧರಿಸಲಾರನು, ಕುಲಪುತ್ರಿಯನ್ನು ಯೋಗ್ಯನಾದ ವಾರಸಿಗಿತ್ತರೆ ಕುಲಕೋಟಿಯನ್ನು ಉದ್ಧರಿಸುವಳು. 4

V

27) ಪಂಪನ ಆದಿಪುರಾಣದಿಂದ "ಪೊಸಯಿಸಿದಳಾಕೆ ನಾಟ್ಯಗಮಮಂ" ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ನೀಲಾಂಜನೇಯ ರಸಭಾವದ ಅಭಿನಯಹಳು ಯಾವಾಗಲೂ ಹೊಸವು. ಅವಳ ದ್ವನಿ ಹೊಸದು. ಚಾಲನೆ ಹೊಸದು. ಕಣ್ಣುಗಳ ನೋಟ ಹೊಸದು. ನಾಟ್ಯದ ಇಂದ್ರಿಯಗಳು ಹೊಸದು. ಹೀಗೆ ಪ್ರತಿನಾಟ್ಯದಲ್ಲಿ ಹೊಸತನದ ನಾಟ್ಯವಾಡುವಾಳು. 4

28) ಸರ್ವಜ್ಞನ "ಹಸನಾಗಿ ದುಡಿದರೆ ಅಶನ ವಸನಗಳು" ಎಂಬ ತ್ರಿಪದಿಯಿಂದ ಆಯ್ದುಕೊಳ್ಳಲಾಗಿದೆ. ಗಂಡು ಹೆಣ್ಣು ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ವಿನಯದಿಂದ ಬಾಳ್ವೆಮಾಡಿದರೆ ಅವರ ಬದುಕು ಅಮೃತದ ಕೆನೆಯಂತೆ ಸಿಹಿಯಾಗಿ ಹಸನಾಗುತ್ತದೆ. 4

## 'ಇ' ವಿಭಾಗ

VI

29) ನಾಗಿ ಬಳುಕಿ ಸಾಗಿಬರಲು ಕಾರು ನಾಚಿಕೊಂಡಿತು. 2

30) ಹಸಿರು ಸೀರೆ, ನೀಲ ಸೀರೆ, ಜರಿಯ ಸೆರಗು ಸೀರೆ. 2

31) ನಾಜಿಯ ತಂದೆ ತಾಯಿ ಅಲ್ಲಿ ಇಲ್ಲಿ ಊರು ಕೇರಿ ಅಲೆದು ಹುಡುಕಿದರು 2

VII

32) ಸು. ರಂ. ಎಕ್ಕುಂಡಿಯವರ ನಗಿಯ ಕತೆ ಆಯ್ದುಕೊಳ್ಳಲಾಗಿದೆ. ಊರ ದೊಡ್ಡ ಸಂಭ್ರಮ ತೇರನೆಳೆಯುದು. ತೇರ ನೋಡಿ ಬರುವ ಬಾರೆ ಎಂದು ನಾಗಿಯ ತಾಯಿಯು ಆಸೆಪಟ್ಟು ಮಗಳನ್ನು ಕರೆದಳು. 3

33) ಸು.ರಂ. ಎಕ್ಕುಂಡಿಯವರ ನಾಜಿಯ ಕತೆಯಿಂದ ಆಯ್ದುಕೊಳ್ಳಲಾಗಿದೆ. ಜಾತ್ರೆಯ್ ಜನರ ಗುಂಪುಗದ್ದಲ, ಅಲ್ಲೇ ಕುಳಿತು ಕೂಗುತ್ತಿದ್ದ ಸೀರೆಯವನು ಸೀರೆ ಬೇಕೇ ಸೀರೆ ನಿಮಗೆ ಬನ್ನಿರೊಂದು ಬಾರಿಗೆ ಎಂದು ಕೂಗುತ್ತಿದ್ದನು. 3

VIII

34) ಕೆರೆಯ ಬಯಲಿನಂಚಿನ ಗದ್ದೆಯಲ್ಲಿ ಮಂಜುಗೌಡನ ಹೆಂಚಿನ ಮನೆ ಅವನಿಗೆ ನಾಗಿ ಎಂಬ ರಾಣಿಯಂತಹ ಒಬ್ಬಳೇ ಮಗಳು. ಬೊಗಸೆಹಣ್ಣಿನ ನಗೆಮಲ್ಲಿಗೆಯ ಹಾವಿನಂತಹ ಜಡೆಯ ಸುಂದರಳಾದ ನಾಗಿ - ನಾಜಿಯ ತಾಯಿ ಊರಿನ ತೇರನೆಳೆಯುವ ದೊಡ್ಡ ಸಂಭ್ರಮದ ಜಾತ್ರೆಗೆ ಹೋಗುತ್ತಿರಲು ಆಗ ಕೊಕ್ಕರೆಗಳು ಕೆರೆಯ ನೀರಿನಲ್ಲಿ ಚುಂಚಿನಿರಿಸಿ ಆಡುತ್ತಿರುವವು. ಹದಿವಯ್ಯಸ್ಸಿನ ಮನಸಿನ ಆಸೆಯ ಹಸಿದ ಕಣ್ಣು ಆಚೆ ಈಚೆ ನೋಡುತ್ತಿತ್ತು. ತಾಯಿಯು ಜೊತೆಯಲ್ಲಿ ನಡೆದ ನಾಗಿ ನಿಂತಿಕೊಂಡು ಅಮ್ಮ ಎಷ್ಟು ಚಂದ ಬೆಕ್ಕು ಇಲ್ಲಿ ನೋಡು ಎಂದು ಮುದ್ದುಸುರಿ ಯುವ ಬಿಳಿಯ ಬೆಕ್ಕಿಗೆ ನಾಗಿಯು ಮೋಹಿತಳಾಗುವಳು. ಹಾಲಿಗಾಗಿ ಹೊಂಚಿಬರುವ ಕಾಳಿಗುಂಟೆ ಸಪ್ಪಳ ಎನ್ನುವ ಕಣ್ಣುಸೆಳೆವ ಸೀರೆಯೊಡನೆ ಸೀರೆಯವನ ಕಂಡಳು. ಚಿಗುರು ಮೀಸೆಯ ಎಳೆಯ ನಗೆಯ ರೂಪವಂತ. ಎದೆಯ ಕದವ ತೆರೆದು ನುಡುದು ಕಣ್ಣಿನಲ್ಲಿಯೇ ಮಾತನ್ನು, ಕಣ್ಣಿನಲ್ಲೇ ಕೂಡಿ ಝುಳಪಿಸಿತು ಮಿಂಚು. ಪ್ರೀತಿಎಂಬ ಸಿಡಿಲು ಹೊಡೆಯಿತು ನಾಗಿಗೆ, ಮೆತ್ತಗೆ ಒರಗಿದಂತಹ ಎದ್ದು ಬಾಲವಾಡಿಸಿ ನಾಗಿಯೊಡನೆ ನಲಿಯುತ್ತಿತ್ತು. ಅಂದಿನಿಂದ ಒಡನಾಟ ಬೆಕ್ಕಿನೊಂದಿಗೆ. 4

) ಮಂಜುಗೌಡ ಕೆರೆಯ ಬಯಲಿನಲ್ಲಿ ಗದ್ದೆಯಲ್ಲಿ ಹೆಂಚಿನ ಮನೆಯಲ್ಲಿ ವಾಸವಾಗಿದ್ದ, ಅವನಿಗೊಬ್ಬಳು ಮಗಳು ನಾಗಮಣಿಯು ಹಾವಿನಂತಹ ಜಡೆಯ ತುಂಬಾ ಹೂ ಮುಡಿಯುವ ರಾಣಿಯಂತಹ ಮಗಳು. ಬೊಗಸೆಗಣ್ಣು ಗಲ್ಲದಲ್ಲಿ ನಗೆಮಲ್ಲಿಗೆ ಅವಳ ನುಡಿ ಮಿಂಚುಕುಡಿ. ಅವಳ ನಗೆ ನೂರು ಬಗೆಯ ನೆನಪಿನ ಬಗ್ಗೆ. ನಾಗಿ ಹುಲ್ಲುಹೊರೆಯ ಹೊತ್ತುಕೊಂಡು ಬರುವ ಹೊತ್ತಿಗೆ ಸೂರ್ಯನು ತಣ್ಣಗಾಗಿ ನಿಂತಿರುವನು. ಅವಳ ಹಗುರ ಹೆಜ್ಜೆಯಲ್ಲಿ ಚೆಲುವು ಚಲ್ಲಿರುತಿತ್ತು. ಅವಳ ಕೈಬೀಸಿ ಬರುವುದನ್ನು ಕಂಡು ನೀರು ಬೀಗ ತುಂಬದೇ ನಿಲ್ಲು ನಾಗಿ ನಿಲ್ಲು ನೋಡಬೇಕು ನಿನ್ನ ಎಂದೆನ್ನುವುದು. ತೇರೆಳೆಯುವ ದೊಡ್ಡ ಜಾತ್ರೆಯ ಸಂಭ್ರಮಕ್ಕೆ ಎಂದು ಹಸಿರು ಸೀರೆ ಉಟ್ಟು ಇಂದ್ರಧನುವಿನಂತೆ ಹೊಳೆಯುವ ರವಿಕೆಯನ್ನು ತೊಟ್ಟು ಬಳುಕಿ ಸಾಗಿ ಬರಲು ಕರುವು ಕೂಡ ನಾಚುವುದು. ಹಸುವು ಹಿಗ್ಗು ತುಂಬಿ ಎದ್ದು ಕೆಚ್ಚಲವನು ಚಾಚುವುದು ಎಂದು ವರ್ಣಿಸಿದ್ದಾರೆ. 4

## "ಈ" ವಿಭಾಗ

**IX**

36) ಮುಡಣದಲ್ಲಿ ಹರಿ, ಪಡುವಣದಲ್ಲಿ ಅಲ್ಲ. 2

37) ಹಣ್ಣು, ಕಾಯಿ, ಹೂ, ಕರ್ಪುರ, ಕುಂಕುಮ ಇವುಗಳನ್ನು ತಂದಿರುವನು. 2

38) ಊರ ತೋಟಿ ಜಲಗಾರ ಜಗದ ತೋಟಿ ಶಿವ. 2

**X**

39) ಕುವೆಂಪುರವರ "ಜಲಗಾರ" ನಾಟಕದಿಂದ ಆಯ್ದುಕೊಳ್ಳಲಾಗಿದೆ. ಇಂದು ನಿಮುರಾ ಶಿವಗುಡಿಯ ಜಾತ್ರೆ ನೀನು ತೇರೆಳಿಯಲು ಬಾ ಎಂದು ರೈತ ಜಲಗಾರನನ್ನು ಕರೆಯುತ್ತಾನೆ ಜಲಗಾರ ನನಗೇಕೆ ಶಿವಗುಡಿ ಜಾತ್ರೆ? ಜೋಯಿಸರ ದೇಗುಲದ ಬಳಿಗೆ ಎನ್ನ ಸೇರಿಸಿರು ಎಂದಾಗ ದೂರದಲ್ಲಿ ನಿಂತು ಕೈಮುಗಿದು ಬಾ ಎಂದು ರೈತ ಹೇಳುವನು. 3

40) ಇಬ್ಬರು ತರುಣರು ತಿರುಕನಿಗೆ ಭಿಕ್ಷೆ ಕೊಡದೆ ಕಣ್ಣಿಗೆ ತಿವಿದು ಜಲಗಾರನನ್ನು ತಳ್ಳಿ ಹೊರಟುಹೋಗುತ್ತಾರೆ. ತಿರುಕ ಹೊಟ್ಟೆಗಿಲ್ಲದೆ ತುತ್ತು ಅಣ್ಣ ಹಾಕುವೆ ಏನಪ್ಪಾ ಎಂದು ಜಲಗಾರನನ್ನು ಕೇಳಿದಾಗ ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ ಎಂದು ಹೇಳುವನು. 3

41) ಜನಿವಾರ ಭೂದಿಗಳಿಲ್ಲದೆ ಶಿವಗುಡಿಗೆ ಶಿವನಾದ ಎನ್ನನ್ನು ಸೇರಿಸರು ಆದ್ದರಿಂದ ನಿಜವಾದ ಶಿವನು ಜಲಗಾರ ಶಿವನು ಶಿವಗುಡಿಯ ಪೀಠದಲ್ಲಿ ಎಂದೆಂದೂ ನಾನಿಲ್ಲ ಹೇದೇವ ನೀನು ಮತ್ತೆಲ್ಲಿರುವೆ ಎಂದು ಜಲಗಾರ ಕೇಳುವನು, ಬೀದಿ ಹುಡಿಸುವ ಬಡವನೆದೆಯಲಿ ನಾನಿರುವೆ ಎಂದು ಶಿವ ಹೇಳುವನು. 3

**XI**

42) ರೈತ ನೇಗಿಲಯೋಗಿ ಮಣ್ಣಿನ ಭೋಗಿ, ಕೆರೆಗಳ ತೊರೆಗಳ ಗೆಳೆಯ ಹೊಲಗಳ ಬಣಗಳ ದೊರೆ, ಉಳುಮೆ ಮಾಡುವನು ಬೆಲೆ ತೆಗೆಯುವನು, ಉಣ್ಣುವನು, ಉಣಿಸುವನು, ಭೂಮಿಯ ಉಳುಮೆಯೇ ಅವನ ಕಾಯಕ ಹಾಗು ಮುಕ್ತಿ. ವೇದಗಳೆಲ್ಲ ಆತನಿಗೆ ತಿಳಿಯದು. ತಾನು ಮಾಡುವ ಕಾಯಕದಲ್ಲಿ ಸತ್ಯವನ್ನು ಕಾಣುವನು. ಸ್ವರ್ಗವನ್ನು ನೋಡವನು. ಧರ್ಮದಲ್ಲಿ ಬದುಕ ಬಾಳುವನು. ಇಹಪರಗಳ ಸಾಧಿಸಿ ತನಗೆ ತಿಳಿದ ಸತ್ಯಮಾರ್ಗವನ್ನು ಬೇರೆಯವರಿಗೆ ಭೂದಿಸುವನು. 4

43) ಕಾಯಕವೇ ಕೈಲಾಸ ಎನ್ನುವಂತೆ ಕರ್ಮವಾರಾಧನೆ, ಸೇವೆ, ಪೂಜೆ. ನನಗೆ ಪೂರಕೆಯೇ ಆರತಿ. ಗುಡಿಸುವುದೇ ನನ್ನ ದೇವರ ಪೂಜೆ. ನನ್ನ ಶಿವನು ಮಣ್ಣಿನಲ್ಲಿಹನು. ನನ್ನ ಶಿವ ಕೊಳೆತ ಕಸದಲ್ಲಿರುವನು, ಕರ್ಪೂರದಲ್ಲಲ್ಲ, ಮಂಗಳಾರತಿಯೊಳಗಿಲ್ಲ, ಹೂ ಗಳಲಿಲ್ಲ, ಯಾವ ಸ್ಥಳದಲ್ಲಿ ನಾನಿಹೆನೊ ಅವನು ಅಲ್ಲಿಯೇ ಇರುವನು. ನನ್ನ ಎದೆಯೆ ದೇಜುಲ. ನನ್ನ ಒಲುಮೆಯೇ ಪೂಜೆ, ನಾನೆಲ್ಲ ಭಕ್ತಿಯಿಂದ ಕೈಮುಗಿವೆನೊ ಅಲ್ಲಿ ತಾನಿಹೆನು. ನಾನು ಎಲ್ಲಿ ಸತ್ಕರ್ಮವೆಸಗುವನೋ ಅಲ್ಲಿ ಮೈದೋರೆಯುವನು. ರೈತನ ನೀಗಿಳಿಯ ಹಿರಿಯೂ ದಿವ್ಯ ದೇಗುಲ.ಉಳುವಾಗ ನೆಡುವಾಗ ಪೂಜೆ ಮಾಡುವೆ. ರೈತನ ಜೀವನವೇ ನಿತ್ಯ ಪೂಜೆ, ಕರ್ವವೇ ನಿತ್ಯ ಯೋಗ ಅಲ್ಲಿಯೇ ಭಗವಂತನ ದರ್ಶನ. 4

44) ಶಾಸ್ತ್ರಿಗಳ ಕಂಗಳಿಗೆ ನೋಡಲು ಕುರೂಪಿಯಾಗಿದ್ದು ಶಿವನನ್ನು ಚೆಲುವಾಂತ ಚಂದಿರನನ್ನು ಅಡಾವೆಯನ್ನಾಗಿ ಮಾಡಿದ್ದಾರೆ.ಅವರಿಗೆ ಪಾಪಿಯಾಗಿದ್ದ ಶಿವನಿಗೆ ಗಂಗೆಯನ್ನು ತೊಡಿಸಿದರಿ ತಲೆಯಲ್ಲಿ.ಪಾಪಿಯಾಗಿದ್ದ ಶವನಿಗೆ ಗಂಗೆಯನ್ನು ತೊಡಿಸಿದರು ತಲೆಯಲ್ಲಿ. ತೊಳೆದು ಶುದ್ಧ ಮಾಡಲು, ಅಪ್ಪುಶರ್ಾನಾಗಿದ್ದ ಶಿವನಿಗೆ ಹಣೆಗಣ್ಣು ಮೂಡಿಸಿದರು. ಸುತ್ತು ಶುಚಿ ಮಾಡಲೆಂದು ರೌದ್ರತೆಯನ್ನು ತೂರಲು

ಉರಗವನ್ನು ಸುತ್ತಿದರು ಕೊರಳಿಗೆ. ಜೋಯಿಸರಾ ಭಾಗಕ್ಕೆ ಶಿವನು ಮುಟ್ಟದವನಾಗಿದ್ದನು. ಆದ್ದರಿಂದಚಂದಿರನನ್ನು ಗಂಗೆಯನ್ನು ಹಣೆಗಣ್ಣನ್ನು ಹಾವುಗಳು ಜನಿವಾರ ಭೂದಿ ಇವುಗಳನ್ನೆಲ್ಲ ಆಭರಣ ಮಾಡಿ ಶಿವಗುಡಿಯಿಯ ಪೀಠದಲ್ಲಿ ಶಿವನನ್ನು ಕುಡಿಸಿದ್ದಾರೆ. 4

## 'ಉ' ವಿಭಾಗ

**XII**

45) ನೀಲಾಂಜನೆ ಅಮರ ನರ್ತಕಿ. ಜೀನನಾಗುವ ಆದಿದೇವನನ್ನು ಸಂತೋಷಪಡಿಸಲು ಇಂದ್ರನು ಸಂಗೀತ ನರ್ತನ ನಡೆಸಿಕೊಡಲು ದೇವಕನ್ನಿಕೆಯಾದ ನೀಲಾಂಜನೇಯ ನೃತ್ಯಪ್ರಸಂಗವು ನಡೆಯುವುದು. 2

46) ರಗಳೆ ಕನ್ನಡದ ದೇಶಿಯ ಛಂದಸ್ಸು. ಹರಿಹರನು ರಗಳೆ ಎನ್ನುವ ಕಾವ್ಯರೂಪಕ್ಕೆ ಪುನರ್ಜನ್ಮ ನೀಡಿದನು. ಹರಿಹರ ರಗಳೆಯನ್ನು ಅತ್ಯಂತ ಸಮರ್ಪಕವಾಗಿ ಬಳಕೆ ಮಾಡಿದ್ದಾನೆ. ರಗಳೆಯು ಸಡಿಯಂತೆ ಸುಳಿಯುತ್ತ ಮೂರು ವಿಧವಾದ ಪ್ರಭೆಎಡಗಳಾಗಿವೆ. ಉತ್ಸಾಹ ರಗಳೆ, ಮಂದಾರ ರಗಳೆ ಮತ್ತು ಲಲಿತ ರಗಳೆ. 2

47) ಸಂಚಿಯ ಹೊನ್ನಮ್ಮ ೧೭ನೇ ಶತಮಾನದ ಚಿಕ್ಕದೇವರಾಯನ ರಾಣೀವಾಸದ ಸಾಮಾನ್ಯ ಊಳಿಗದ ಹೆಣ್ಣುಮಗಳು. ಬಾಲ್ಯದಲ್ಲಿಯೇ ಸಾಹಿತ್ಯ ಸಂಪರ್ಕ, ಅರಮನೆಯ ವಿದ್ಯುತ್ ಸಭೆಯ ಒಡನಾಟ ಇವುಗಳು ಅವಳನ್ನು ಕವಿತ್ರಿಯನ್ನಾಗಿ ಮಾಡಿತು. ಸಾಂಗತ್ಯ ಪರಾಕಾರದಲ್ಲಿ ಹದಿಬದಿಯ ಧರ್ಮ ಇವರ ಕಾವ್ಯ.

**XIII**

48) ಗಾವಿಲ – ದಡ್ಡ 1
ಕನಕ - ಬಂಗಾರ 1
ಸೌಧಾಮಿನಿ – ಮಿಂಚು 1

49) ಕುಲವಧು - ಉತ್ತಮ ಹೆಣ್ಣು, ಮಾನಿನಿ 1
ಗೋಣು - ಕುತ್ತಿಗೆ, ಕತ್ತು 1
ಶಬರ - ಬೇಡ, ಕಿರಾತಕ 1

50) ಜವ - ವೇಗ, ಯಮ 1
ಘಟ - ಮಡಿಕೆ, ದೇಹ 1
ಕಾಳು - ಕೀಳು, ಧಾನ್ಯ 1

51) ಸುಖ x ದುಃಖ 1
ಸತ್ಯ x ಅಸತ್ಯ 1
ಹರಣ x ಪ್ರಾಣ 1

52) ಸಗ್ಗ - ಸ್ವರ್ಗ 1
ತಿಸುಲ - ತ್ರಿಶೂಲ 1
ಹರಣ – ಪ್ರಾಣ 1

53) ಗುಣ + ಆಭರಣ 1
ನಿಟಿಲ + ಅಕ್ಷಿ 1
ಕಡು + ಕಲಿ 1

54) ಸಿಡಿಮಿಡಿ - ಕೋಪಗೊಳ್ಳು 1

ದುರ್ಗತಿ - ಕಷ್ಟಕಾಲ 1

ಮನಮುಟ್ಟು - ಮನ್ನಸ್ಸಿಗೆ ತಗ್ಗು 1

ಈ ಶಬ್ದಗಳಿಗೆ ಅರ್ಥ ಬರುವ ರೀತಿಯಲ್ಲಿ ವಾಕ್ಯ ರಚಿಸಿ.

'ಊ' ವಿಭಾಗ

**XIV**

55) ಕೆಡೆ ಕಡೆಯೆಂದಾರ್ದೆಚ್ಚಮ್

ಘುಡುಘುಡಿಪ ಮಹಾವರಾಹನಂ ಕೂರ್ಗಣೆಯಿಂ

ಈ ರೀತಿಯಾಗಿ ಗೆರೆಯೆಳೆದ ಪದಗಳು ಎರಡು ವ್ಯಂಜನಗಳಿಂದ ಕುಡಿದ ಪದ ಪುರಾವರ್ತಿತವಾದರೆ ಅದು ಛೆಕಾನುಪ್ರಾಸ. 4

56) ಹಾವಿನಂಥ ಜಡೆಯ ತುಂಬಾ ಹೂವ ರಾಣಿಯು

ಉಪಮೇಯ - ಜೇಡ್ (ನಾಗಿಯ ಜಡೆ)

ಉಪಮಾನ - ಹಾವು

ವಾಚಕ - ಅಂತೆ

ಅಲಂಕಾರ - ಉಪಮಾ ಅಲಂಕಾರ

ಉಪಮಾ ಎಂದರೆ ಹೋಲಿಕೆ ಎಂದರ್ಥ ಉಪಮೇಯ ಉಪಮಾನಗಳೊಳಗೆ ಉಪಮಾ ಇರುವ ಅಲಂಕಾರವೇ ಉಪಮಾ ಅಲಂಕಾರ. ನಾಗಿಯ ಜಡೆಯನ್ನು ಹಾವಿಗೆ ಹೋಲಿಸಲಾಗಿದೆ.

**XV**

57) ಳ ಳ ಳ

_ _ _U U _ _

ನಾರೀ | ರೂಪದ | ಯಂತ್ರಂ |

ಳ ಳ ಳ ಳ ಳ

_ U U _ _ U _ U UUUU _ _

ಚಾರುತ | ರಂ ನೋ | ಡೆ ನೋಡೆ | ಕರಗಿದು | ದೀ ಸಂ |

ಳ ಳ ಳ

_U U _U U U U _

ಸಾರದ | ನಿತ್ಯತೆ | ಮನದೊಳ್ |

ಳ ಳ ಳ ಳ ಳ

_ _ U U _ U _ U _ U U U U _

ಬೀರೂ | ರಿದುದೀ | ಗಳಂತಿ | ದಂ ಕಡೆ | ಗೆನಿಪಂ |

ನಾಲ್ಕು ಸಾಲಿನ ಕಂದಪದ್ಯ ಮೊದಲು ಮತ್ತು ಮೂರು ಚಿಕ್ಕ ಸಾಲುಗಳು, ನಾಲ್ಕು ಮಾತ್ರೆಯ ಮೂರು ಗಣಗಳು.ಎರಡು ಮತ್ತು ನಾಲ್ಕನೆಯದು ದೊಡ್ಡಸಾಲುಗಳು, ನಾಲ್ಕು ಮಾತ್ರೆಯ ಐದು ಗಣಗಳು. ಒಟ್ಟು ಅರವತ್ನಾಕು ಮಾತ್ರೆಯ ಕಂದಪದ್ಯ. 4

58) ವಿ ವಿ ವಿ ವಿ

ಅಲ್ಲಿಪ್ಪ | ನಿಲ್ಲಿಪ್ಪ | ನೆಲ್ಲಿಪ್ಪ | ನೆನಬೇಡ |

ವಿ ಬ್ರ ವಿ ವಿ

ಕಲ್ಲಿನಂ | ತಿಪ್ಪ | ಮಾನವನ | ಮನಕರೆಗೆ |

ವಿ ಬ್ರ ವಿ

ಅಲ್ಲಿಪ್ಪ | ನೋಡೆ | ಸರ್ವಜ್ಞ |

ಮೂರು ಸಾಲಿನ ಪದ್ಯ ತ್ರಿಪದಿ ಎದು ಅಂಶಿ ಛಂದಸ್ಸು ಅನ್ನು ಹೊಂದಿದ್ದು ನಂತರದ ದಿನಗಳಲ್ಲಿ ಮಾತ್ರಾ ಛಂದಸ್ಸಿಗೆ ತಿರುಗಿದೆ. ತ್ರಿಪದಿಯನ್ನು ಮಾತ್ರಾ ಛಂದಸ್ಸು ಹಾಗು ಅಂಶಿ ಛಂದಸ್ಸಿನಲ್ಲಿ ಬಳಕೆ ಯಾಗುತಿದ್ದು ಒಟ್ಟು ಹನ್ನೊಂದು ಗಣಗಳನ್ನು ಹೊಂದಿದ್ದು ಆರು ಮತ್ತು ಹತ್ತು ಬ್ರಹ್ಮ ಗಣಗಳಾಗಿದ್ದು, ಉಳಿದೆಲ್ಲವೂ ವಿಷ್ಣು ಗಣಗಳಾಗಿದ್ದು. ಆದರೆ ಯಾವುದೇ ಕಾರಣಕ್ಕೂ ಬ್ರಹ್ಮ ಗಣ ಬದಲಾಗಬಾರದು. ವಿಷ್ಣುವಿನ ಸ್ಥಾನದಲ್ಲಿ ರುದ್ರ ಗಣ ಬರಬಹುದು. 4

**XVI**

59) ನೀಲಾಂಜನೆಯು ಮಧುರ ರೂಪ ಲತಾ ಕೋಮಲೆ, ಅವಳಿಗೆ ಆಗ ಆಯುಷ್ಯ ಮುಗಿಯುತ್ತ ಬರಲು ಮಿಂಚಿನಂತೆ ತಕ್ಷಣವೇ ದೇವಲೋಕದ ಸ್ತ್ರೀಯಾದ ನೀಲಾಂಜನೆಯು ರಂಗಮಂಟಪದದಿಂದ ಅದೃಶ್ಯವಾಗುವಳು ಆಗ. 4